**<u>ಸಾಕ್ಷಿಯನ್ನು ದಿನಾಂಕ: 18-02-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ AMK ರವರಿಂದ</u>**

**1.** ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ವ್ಯವಹಾರಗಳ ಬಗ್ಗೆ ನನ್ನ ತಂದೆ ನನಗೆ ಹೇಳುತ್ತಿದ್ದು ಅವರು ಎಲ್ಲಿ ಹಣಕಾಸಿನ ವ್ಯವಹಾರ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಪವಾಡಪ್ಪನನ್ನು ನಾನು ನೋಡಿರುವುದಿಲ್ಲ. ಸದರಿ ಪವಾಡಪ್ಪರವರಿಗೆ 4 ಜನ ಮಕ್ಕಳಿದ್ದು ಅರೆಲ್ಲರನ್ನೂ ನಾನು ನೋಡಿರುತ್ತೇನೆ. ಪವಾಡಪ್ಪನವರ ಮಕ್ಕಳು ಜಮೀನಿನ ಬಗ್ಗೆ ಏನು ವ್ಯವಹಾರ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಸುಮಾರು 15-20 ವರ್ಷಗಳಿಂದ ದಾವಾ ಆಸ್ತಿಗಳ ಬಗ್ಗೆ ನನಗೆ ಗೊತ್ತು. ಪ್ರತಿವಾದಿ 3 ರಿಂದ 5 ರವರ ತಂದೆ ಹನುಮಂತಪ್ಪರವರು ದಿಃ11.03.1945 ರಂದು ಸ.ನ. 65/1 ರಲ್ಲಿ 30 ಗುಂಟೆ ಜಮೀನನ್ನು ಖರೀದಿ ಮಾಡಿರುವ ಬಗ್ಗೆ ನನ್ನ ತಂದೆ ನನಗೆ ಹೇಳಿರುತ್ತಾರೆ. ದಿಃ 30.01.1962 ರಲ್ಲಿ ಪ್ರತಿವಾದಿ 3 ರಿಂದ 5 ರವರ ತಂದೆ ಹನುಮಂತಯ್ಯು, ತಿಮ್ಮಯ್ಯುನ ಮಗ ಹನುಮಂತಯ್ಯು, ತಿಮ್ಮದಾಸಪ್ಪನ ಮಗ ವೆಂಕಟಪ್ಪರವರು ವಿಭಾಗ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತು. ಆ ರೀತಿ ವಿಭಾಗ ಮಾಡಿಕೊಂಡ ನಂತರ ಅವರೆಲ್ಲರೂ ಬೇರೆ ಬೇರೆ ವಾಸ ಮಾಡುತ್ತಿದಲ್ಲು ವ್ಯವಹಾರಗಳನ್ನು ಬೇರೆ ಬೇರೆ ಮಾಡುತ್ತಿದ್ದರು ಎಂದರೆ ಸರಿ. ಅವರವರ ಹಿಸ್ಸೆಗೆ ಬಂದ ಆಸ್ತಿಗಳಲ್ಲಿ ಅವರವರು ಅನುಭವಿಸುತ್ತಿರುತ್ತಾರೆಂದರೆ ಪವಾಡಪ್ಪನ ಮಕ್ಕಳು ಅನುಭವಿಸುತ್ತಿರುತ್ತಾರೆ.

2. ದಿಃ 30.01.1962 ರ ವಿಭಾಗದಲ್ಲಿ ಸ.ನ. 40/1 ರಲ್ಲಿ ಪವಾಡಪ್ಪರವರಿಗೆ 30 ಗುಂಟೆ, ತಿಮ್ಮಯ್ಯುನಿಗೆ 30 ಗುಂಟೆ, ತಿಮ್ಮದಾಸಪ್ಪನಿಗೆ 30 ಗುಂಟೆ ಹೋಗಿದ್ದು ಉಳಿಕೆ ಜಮೀನು ಅಸ್ತಿತ್ವದಲ್ಲಿರುವುದಿಲ್ಲ. ಆ ರೀತಿ ವಿಭಾದ ರೀತಿಯಲ್ಲಿ ಬಂದ ಖಾತೆ ಪಹಣಿಗಳು ಅವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ಪವಾಡಪ್ಪರವರ 4 ನೇ ಮಗ ದಾಸಪ್ಪರವರ ಭಾಗಕ್ಕೆ ಬಂದ 1 ಎಕರೆ ಜಮೀನನ್ನು ಪ್ರತಿವಾದಿ 3 ರಿಂದ 5 ರವರ ತಂದೆ ಹನುಮಂತಪ್ಪರವರಿಗೆ ದಿಃ22.12.1980 ರ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ನಂತರ ಹನುಮಂತಪ್ಪರವರು ಸ್ವಾಧೀನದಲ್ಲಿರುತ್ತಾರೆಂದರೆ ಸರಿ. ಹನುಮಂತಪ್ಪರವರು ಮೃತ ಪಟ್ಟ ನಂತರ ಪ್ರತಿವಾದಿ 3 ರಿಂದ 5 ರವರು ಸ್ವಾಧೀನದಲ್ಲಿರುತ್ತಾರೆಂದರೆ ಸರಿ. ಈ ದಾವೆಯನ್ನು ಎಷ್ಟು ಆಸ್ತಿಗಳಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆಂದು ಗೊತ್ತಿಲ್ಲ. ದಾವಾ 5 ನೇ ಆಸ್ತಿಯಲ್ಲಿ ವಾದಿಗಳು ಸ್ವಾಧೀನದಲ್ಲಿರುತ್ತಾರೆ. ಸದರಿ ಆಸ್ತಿ ಜಂಟಿ ಖಾತೆಯಲ್ಲಿರುತ್ತದೆ. ಐಟಂ ನಂ 4 ರ ಬಗ್ಗೆ ನನಗೆ ಗೊತ್ತಿಲ್ಲ. ದಾವಾ 7 ನೇ ಆಸ್ತಿಯು 3 ಎಕರೆ ವಿಸ್ತೀರ್ಣ ಇದ್ದು ಆ ಪೈಕಿ ಹನುಮಂತಪ್ಪನ ಹೆಸರಿನಲ್ಲಿ 30 ಗುಂಟೆ ಇರುತ್ತದೆ. ಉಳಿದ

ಜಮೀನನ್ನು ತಿಮ್ಮಯ್ಯ, ದಾಸಪ್ಪ ಮತ್ತು ಗೋವಿಂದಪ್ಪರವರು ವಿಭಾಗ ಮಾಡಿಕೊಂಡಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದ ದಾಖಲಾತಿಗಳನ್ನು ಕೆಲವು ವರ್ಷಗಳ ಹಿಂದೆ ನಾನು ನೋಡಿರುತ್ತೇನೆ. ದಾವಾ ಆಸ್ತಿಯ ವ್ಯವಹಾರದ ಬಗ್ಗೆ ನನಗೇನು ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ 5 ನೇ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಸದರ ಸ.ನ ನಲ್ಲಿ ನಮಗೆ ಸೇರಿದ ಜಮೀನು ಇರುತ್ತದೆ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನಮಗೆ ಸೇರಿದ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**